ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 144/2021
ಪಿ.ಡಬ್ಲ್ಯೂ : 1

ದಿನಾಂಕಃ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: **1 ನೇ ಪ್ರತಿವಾದಿ ಪರ ಶ್ರೀ ಎಮ್ ಜೆ ಎಸ್. ವಕೀಲರಿಂದಃ**

1. 1 ನೇ ಪ್ರತಿವಾದಿಯವರು ಅವರ ತಕರಾರು ಅರ್ಜಿಯಲ್ಲಿ ಹೇಳಿರುವ ಬೆಳ್ವೆ ಗ್ರಾಮದ ಬಿ ಶೆಡ್ಯೂಲ್ ಆಸ್ತಿಗಳು ಯಾವುವು ಎಂದು ಗೊತ್ತಿರುತ್ತದೆ. ಬೆಳಂಜೆ ಗ್ರಾಮದ ಸರ್ವೆ ನಂಬರ್ 17/15 ಎ 24 ಸೆಂಟ್ಸ್ , ಸರ್ವೆ ನಂಬರ್ 17/30 ರ 24 ಸೆಂಟ್ಸ್ ಸರ್ವೆ ನಂಬರ್ 17/14 ಬಿ 27 ಸೆಂಟ್ಸ್, ಸರ್ವೆ ನಂಬರ್ 12/9 ಎ 7 ಸೆಂಟ್ಸ್ ಸರ್ವೆ ನಂಬರ್ 18 /1 ಬಿ ರ 5 ಸೆಂಟ್ಸ್ ಸರ್ವೆ ನಂಬರ್ 12/7 ರ 18 ಸೆಂಟ್ಸ್, ಸರ್ವೆ ನಂಬರ್ 18/7 ಬಿ 1 61 ಸೆಂಟ್ಸ್ ಸರ್ವೆ ನಂಬರ್ 11/2 17 ಸೆಂಟ್ಸ್ ಸರ್ವೆ ನಂಬರ್ 11/2 65 ಸೆಂಟ್ಸ್ ಸರ್ವೆ ನಂಬರ್ 11/2 14 ಸೆಂಟ್ಸ್ ಸರ್ವೆ ನಂಬರ್ 11/2 30 ಸೆಂಟ್ಸ್, ಸರ್ವೆ ನಂಬರ್ 11/2 30 ಸೆಂಟ್ಸ್ ಸರ್ವೆ ನಂಬರ್ 11/2 ರ 0.7 ಸೆಂಟ್ಸ್ ಸರ್ವೆ ನಂಬರ್ 11/2 ರ 17 ಸೆಂಟ್ಸ್ , ಸರ್ವೆ ನಂಬರ್ 11/2 ರ 13 ಸೆಂಟ್ಸ್ ಸರ್ವೆ ನಂಬರ್ 11/2 ರ 13 ಸೆಂಟ್ಸ್ ಸರ್ವೆ ನಂಬರ್ 11/2 ರ 32 ಸೆಂಟ್ಸ್ 11/2 ರ 30 ಸೆಂಟ್ಸ್ ಸರ್ವೆ ನಂಬರ್ 9/54 26 ಸೆಂಟ್ಸ್ ಸರ್ವೆ ನಂಬರ್ 17 /9 ಸಿ 12 ಸೆಂಟ್ಸ್ ಸರ್ವೆ ನಂಬರ್ 18/ 4 ಬಿ 2 21 ಸೆಂಟ್ಸ್ ಈ ಆಸ್ತಿಗಳು ನಮ್ಮ ಹಾಗೂ ಪ್ರತಿವಾದಿ 1 ಮತ್ತು 2 ರ ನಡುವೆ ವಿಭಾಗ ಆಗತಕ್ಕ ಆಸ್ತಿಗಳು ಎಂದರೆ ಸರಿ.

2. ಅದೇ ರೀತಿ ನನ್ನ ದಾವಾ ಶೆಡ್ಯೂಲ್ ಎ ನಲ್ಲಿ ನಮೂದಿಸಿರುವ 1 ರಿಂದ 9, 11 , 13 , 14 ನನ್ನ ಹಾಗೂ ಪ್ರತಿವಾದಿಗಳ ನಡುವೆ ವಿಭಾಗ ಆಗತಕ್ಕ ಆಸ್ತಿಗಳು ಎಂದರೆ ಸರಿ. ಲಿಖಿತ ತಕರಾರಿನ ಬಿ ಶೆಡ್ಯೂಲ್ ಆಸ್ತಿ ಹಾಗೂ ದಾವಾ ಸ್ವತ್ತಿನ 1 ರಿಂದ 3, 11, 13, 14 ರಲ್ಲಿ 1 ನೇ ಪ್ರತಿವಾದಿ ನನ್ನ ಹಾಗೂ 2 ನೇ ಪ್ರತಿವಾದಿಯ ಬಳಿ ಭಾಗ ಕೇಳಿಕೊಂಡು ಬಂದಿರುತ್ತಾರೆ ಎಂದರೆ ಸರಿ.

3. ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ 1 ನೇ ಪ್ರತಿವಾದಿ ರಾಜೀವ ಶೆಟ್ಟಿಯವರು ಅಭಿವೃದ್ದಿ ಪಡಿಸಿರುತ್ತಾರೆ ಎಂದರೆ ಸಾಕ್ಷಿ ಎಲ್ಲರೂ ಸೇರಿ ಅಭಿವೃದ್ದಿ ಪಡಿಸಿರುತ್ತೇವೆ ಎಂದು

ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಗಳನ್ನು 1 ನೇ ಪ್ರತಿವಾದಿ ಮಾತ್ರ ಅಭಿವೃದ್ಧಿ ಪಡಿಸಿದ್ದು ನಾವು ಯಾವುದೇ ಅಭಿವೃದ್ಧಿ ಪಡಿಸಿಲ್ಲ ಎಂದರೆ ಸರಿಯಲ್ಲ. ಲಿಖಿತ ತಕರಾರಿನ ಬಿ ಶೆಡ್ಯೂಲ್ ಆಸ್ತಿಯಲ್ಲಿ 10 ಮುಡಿ ಅಕ್ಕಿ, 1 ಸಾವಿರ ತೆಂಗಿನ ಕಾಯಿ, 10 ಕ್ವಿಂಟಾಲ್ ಅಡಿಕೆ, ವಾರ್ಷಿಕ ನಿವ್ವಳ ಆದಾಯ ಇರುತ್ತದೆ ಎಂದರೆ ಸಾಕ್ಷಿ ಎಲ್ಲದರಲ್ಲೂ ಇರುತ್ತದೆ ಎಂದು ನುಡಿಯುತ್ತಾರೆ.

4. ಬಿ ಶೆಡ್ಯೂಲ್ ಆಸ್ತಿಯ ಉತ್ಪತ್ತಿಯನ್ನು ನಾನು ಹಾಗೂ ನನ್ನ ಅಣ್ಣ ಪಡೆಯುತ್ತಾ ಬಂದಿರುತ್ತೇವೆ ಎಂದರೆ ಸರಿ. ಅವುಗಳ ಉತ್ಪತ್ತಿಯಲ್ಲಿ 1 ನೇ ಪ್ರತಿವಾದಿಗೆ ಈ ದಾವೆ ದಾಖಲಾದ ಸಮಯದಿಂದ ಇಲ್ಲಿಯವರೆಗೆ ಅವರಿಗೆ ಉತ್ಪತ್ತಿಯನ್ನು ಕೊಡಲು ನಾವು ಬದ್ಧರಿರುತ್ತೇವೆ ಎಂದರೆ ಸರಿ. ಬಳ್ಳೂರು ಗ್ರಾಮದ ಐಟಂ ನಂಬ್ರ 1 ರಿಂದ 9, 11 , 13 , 14 ರಲ್ಲಿ ಅಡಿಕೆ, ತೆಂಗು ಉತ್ಪತ್ತಿ ಇರುತ್ತದೆ. ಯಾವುದೇ ಆದಾಯದ ಉತ್ಪತ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ 2 ನೇ ಪ್ರತಿವಾದಿ ಸೇರಿಕೊಂಡು 1 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ವ್ಯಾಜ್ಯ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಎಲ್ಲ ಒಟ್ಟಿಗೆ ಮಾಡಿದ್ದೇವು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ          ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ